

## ಗೋಸ್ವರ್ಗದಲ್ಲೊಂದು ಆಲೆಮನೆ ಹಬ್ಬ

ನಾನು ಚಿಕ್ಕವನಿರುವಾಗ, ಆಲೆಮನೆಯ ಒಲೆಯ ಧಗಧಗಿಸುವ ಬೆಂಕಿಯ ಪಕ್ಕದಲ್ಲಿ ಮೈಕೈ ಸವರಿಕೊಳ್ಳುತ್ತಾ, ಕೈಯಲ್ಲಿ ಬಾಳೆಎಲೆ ಹಿಡಿದು ಕುಳಿತು ಗೆಳೆಯರ ಜೊತೆ ಎದುರು ನೋಡುತ್ತಿದ್ದಿದ್ದು ಇನ್ನೊಂದು ಅರ್ಧಗಂಟೆಯಲ್ಲಿ ತಯಾರಾಗುವ ಬಿಸಿ ಬೆಲ್ಲವನ್ನು. ಜನವರಿ ಸಮಯದ, ರಾತ್ರಿ ಹನ್ನೊಂದು ಗಂಟೆಯ ನಮ್ಮೂರ ಚಳಿಯನ್ನು ದೂರ ಓಡಿಸಲು ಈ ಆಲೆಮನೆಯ ಬೆಂಕಿಯೇ ಸರಿ. ದೊಡ್ಡದಾದ ಬಾಣಲಿಯಲ್ಲಿ ಕೊತಕೊತ ಕುದಿಯುವ ಕಬ್ಬಿನ ರಸ, ಅದು ಹಾಗೆ ನೊರೆ ನೊರೆಯಾಗಿ ನಂತರ ಬೆಲ್ಲವಾಗಿ ಯಾವಾಗ ನಮ್ಮ ಕೈಲಿರುವ ತುಂಡು ಬಾಳೆಯ ಮೇಲೆ ಬಿತ್ತೋ ಆವಾಗ ಬಿಸಿಬೆಲ್ಲವು ಎಳೆ ಬಾಳೆಯ ಜೊತೆ ಸೇರಿದಾಗಿನ ಸುವಾಸನೆಯನ್ನೊಮ್ಮೆ ಆಘ್ರಾಣಿಸುತ್ತಾ, ಬೆಲ್ಲದ ಒಂದು ಹನಿಯೂ ಭೂಸ್ಪರ್ಶವಾಗದಂತೆ ನಾಜೂಕಾಗಿ ಎಡಗೈಲಿ ಹಿಡಿದು, ಬಲಗೈ ತೋರುಬೆರಳಲ್ಲಿ ಬೆಲ್ಲದ ಬಿಸಿಯನ್ನೊಮ್ಮೆ ಸಾವಧಾನವಾಗಿ ನೋಡಿ, ತುದಿ ಬೆರಳನ್ನು ಬೆಲ್ಲದಲ್ಲಿ ಅದ್ದಿ ಬಾಯಲ್ಲಿಟ್ಟಾಗಿನ ಆ ಸವಿಯನ್ನು ನೆನಪಿಸಿಕೊಂಡಿದ್ದು ಇತ್ತೀಚೆಗೆ ನಡೆದ ಗೋಸ್ವರ್ಗದ 'ಆಲೆಮನೆ ಹಬ್ಬ'ದಲ್ಲಿ.

ಹೌದು, ಹಳೆಯ ನೆನಪನ್ನೊಮ್ಮೆ ತಾಜಾಗೊಳಿಸಲು ಆಲೆಮನೆಯನ್ನು ಇತ್ತೀಚೆಗೆ ನೋಡಲು ಹೋಗಿದ್ದು ಕುಮಟಾದ ಹೊಸಾಡಿನಲ್ಲಿರುವ 'ಗೋಸ್ವರ್ಗ'ಕ್ಕೆ. ಇಲ್ಲಿ ಕಬ್ಬಿನ ಹಾಲನ್ನು ಕುಡಿಯುವುದರ ಜೊತೆಗೆ ಕಬ್ಬಿನ ಹಾಲಿನ ಮಣ್ಣಿ, ತೊಡೆದೇವು, ಬೆಲ್ಲದಲ್ಲಿ ಹಾಕಿದ ಬಾಳೆದಿಂಡು/ಪಪ್ಪಾಯಿ ಇತ್ಯಾದಿ ತಿಂದಿದ್ದಾಯಿತು. ಮಕ್ಕಳು ಕಬ್ಬಿನ ರಸದಿಂದ ಮಾಡಿದ ದೋಸೆಯನ್ನು ತಿಂದರು. ಇಂತಹ ಜಾಗಕ್ಕೆ ಹೋಗುವಾಗ ಮಕ್ಕಳನ್ನು ಜೊತೆ ಕರೆದುಕೊಂಡು ಹೋಗಬೇಕು. ಮಕ್ಕಳಿಗೆ ನಮ್ಮ 'ಬೆಲ್ಲದಂತಹ ಸವಿ ಬಾಲ್ಯವನ್ನೊಮ್ಮೆ' ತೋರಿಸಬಹುದು. ಹಳೆತನದ ಸೊಗಡನ್ನು ಉಳಿಸಿ ಬೆಳೆಸಲು ಇವು ಸಹಕಾರಿ.

ಭಾರತದ ನೂರಾರು ವಿಧದ ಗೋವಿನ ತಳಿಗಳನ್ನು ಗೋಸ್ವರ್ಗದಲ್ಲಿ ನೋಡಬಹುದು. ಗೋವನ್ನು ಹತ್ತಿರದಿಂದ ಮೈದಡವಿ ಸುಖಿಸಬಹುದು. ಪ್ರಾಣಿಪ್ರಿಯರು ಸಾಧ್ಯವಾದರೆ ಪಶು ಆಹಾರವನ್ನು ತೆಗೆದುಕೊಂಡು ಹೋಗಬಹುದು ಅಥವಾ ಅಲ್ಲಿ ಹೋಗಿ ದೇಣಿಗೆಯ ರೂಪದಲ್ಲಿ ಹಣವನ್ನು ಕೊಡಬಹುದು.

–ಅರ್ಕೆ ಆಡುಕಳ

## ರಾಮಸೇತುವಿನ ತೇಲುವ ಕಲ್ಲು

ಲಂಕೆಗೆ ಸೇತುವೆ ನಿರ್ಮಿಸಲು ಕಲ್ಲಿನ ಮೇಲೆ ರಾಮ ಎಂದು ಬರೆದು, ಅದನ್ನು ಸಮುದ್ರಕ್ಕೆ ಎಸೆಯುತ್ತಾರೆ. ಆಗ ಆ ಕಲ್ಲುಗಳು ನೀರಿನಲ್ಲಿ ಮುಳುಗದೇ ಸಮುದ್ರದಲ್ಲಿ ತೇಲುತ್ತವೆ ಎಂಬುದು ರಾಮಾಯಣದಿಂದ ತಿಳಿದ ಪ್ರತೀತಿ. ಈ ಪ್ರತೀತಿಗೆ ಉದಾಹರಣೆಯಾಗಿ ನೀರಿನಲ್ಲಿ ತೇಲುವ ಕಲ್ಲಿನ ಚಿತ್ರವೇ ಇದು.

ರಾಮೇಶ್ವರ ಹಾಗೂ ಧನುಷ್ ಕೋಟಿಯ ನಡುವೆ 'ರಾಮಸೇತು' ಎಂಬ ಸ್ಥಳವಿದ್ದು, ಅಲ್ಲಿನ ದೇವಸ್ಥಾನದಲ್ಲಿ ರಾಮ ಲಕ್ಷ್ಮಣ ಸೀತೆಯರ ವಿಗ್ರಹಗಳೊಂದಿಗೆ ವಿಭೀಷಣನ ವಿಗ್ರಹವೂ ಇದೆ. ಅಲ್ಲಿಯೇ ಶ್ರೀ ರಾಮ ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿದ್ದನೆಂಬುದು ಐತಿಹ್ಯ. ಸಮುದ್ರದ ದಡದ ಮೇಲಿರುವ ಆ ದೇವಸ್ಥಾನದ ಎದುರಿನಲ್ಲಿ ಚಿಕ್ಕ ಹೊಂಡವಿದೆ. ಅದರೊಳಗೆ ತೇಲುವ ಕಲ್ಲನ್ನು ಕಾಣಬಹುದು. ಅದರ ವೀಕ್ಷಣೆ ಮತ್ತು ಕಲ್ಲನ್ನು ತಲೆಯ ಮೇಲೆ ಇಡಲು 20 ರೂಪಾಯಿ ಶುಲ್ಕ ನಿಗದಿಪಡಿಸಲಾಗಿದೆ. ಆಮೇಲೆ ಆ ಕಲ್ಲನ್ನು ಅಲ್ಲಿರುವ ಹೊಂಡದಲ್ಲಿ ಮುಳುಗಿಸಲು ಹೇಳುತ್ತಾರೆ. ಆದರೆ ಕಲ್ಲನ್ನು ಹೊಂಡಕ್ಕೆ ಹಾಕಿದಾಗ ನೀರಿನಲ್ಲಿ ಮುಳುಗುವುದಿಲ್ಲ. ಬಲ ಪ್ರಯೋಗಿಸಿ ಅದನ್ನು ಜೋರಾಗಿ ನೀರಿನೊಳಗೆ ತಳ್ಳಿದರೂ ರಬ್ಬರ್ ಚೆಂಡಿನಂತೆ ಪುಟಿದು ಮೇಲೆ ಬರುತ್ತದೆ.

–ಮುರಲೀಧರ ಕುಲಕರ್ಣಿ, ಬೀದರ್








